ದೇಶದಲ್ಲಿ ಅಧಿಕಾರ ಬರುವುದಿಲ್ಲ ಎಂದು. ಏಕೆಂದರೆ ಇವರು ಅತ್ಯಂತ ನಿಷ್ಠುರವಾದಿಗಳೂ ಪ್ರಾಮಾಣಿಕರೂ ಆಗಿರುತ್ತಾರೆ ಮತ್ತು ಇವರಿಗೆ ಮೋಸ ಮಾಡಲು ತಿಳಿಯುವುದಿಲ್ಲ. ವ್ಯಕ್ತಿತ್ವವನ್ನು ಮಾರಿ ಅಧಿಕಾರ ಪಡೆಯುವ ಚಾಲಾಕನ್ನು ಕಲಿಯುವದು ಇಂಥ ಸೂಕ್ಷ್ಮ ಸಂವೇದನಾ ಶೀಲ ಮನಸ್ಸಿಗೆ ಸಾಧ್ಯವೇ ಇಲ್ಲ. ವೆಂಕಟರಾಮ್‌ನಂತವರಿಗೆ ಅಧಿಕಾರದ ಅಭಿಲಾಷೆಯೂ ಇಲ್ಲ. ಏಕೆಂದರೆ ಒಪ್ಪಂದಕ್ಕೆ ಒಡ್ಡಿಕೊಂಡು ವ್ಯಕ್ತಿತ್ವ ವಿದಳನದಲ್ಲಿ ಅವರು ಬದುಕಲಾರರು.

ಸಮಾಜವಾದಿಗಳು ಸಮಯ ಸಾಧಕರು ಎಂಬುದು ಅನೇಕರ ಅಭಿಪ್ರಾಯ. ಅವಕಾಶ ಸಿಕ್ಕಿದಾಗಲೆಲ್ಲ ಕಾಂಗ್ರೆಸ್ಸಿಗೆ ಹಾರಿ ಲಾಭ ಗಿಟ್ಟಿಸಿಕೊಂಡ ಸಮಾಜವಾದಿಗಳ ಉದ್ದದ ಪಟ್ಟಿಯನ್ನು ನೋಡಿ ಜನರಿಗೆ ಬಹುಶಃ ಹೀಗೆ ಅನ್ನಿಸಿರಬೇಕು. ಆದರೆ ವೆಂಕಟರಾಮ್ ಪ್ರಜಾಪ್ರಭುತ್ವದ ತತ್ವಗಳಿಗೆ ತಮ್ಮನ್ನು ಅರ್ಪಿಸಿಕೊಂಡು, ಸತತವಾಗಿ ವಿರೋಧ ಪಕ್ಷದ ಆತ್ಮಕ್ಕೆ ಆಕ್ಸಿಜನ್ ತುಂಬಿಸಿ ಸರಿ ಮಾಡಲು ಹೆಣಗಾಡಿದರು. ಅವರೆಂದೂ ಜಾರ್ಜ್ ಫರ್ನ್ಯಾಂಡಿಸ್ ಹಾಗೆ ಇಂದಿರಾ ಗಾಂಧಿಯನ್ನು ವಿಪರೀತ ಬೈದವರಲ್ಲ. ಆದರೆ ಗಂಭೀರವಾಗಿ ಜನರು ಏಕೆ ಹೀಗೆ ಶ್ರೀಮತಿ ಗಾಂಧಿಯನ್ನು ಬೆಂಬಲಿಸುತ್ತಾರೆ ಎಂಬುದನ್ನು ಆಳವಾಗಿ ತಿಳಿದುಕೊಳ್ಳಲು ಪ್ರಯತ್ನಿಸುತ್ತಿದ್ದರು. ನಮ್ಮ ಜನರ ಮನಸ್ಸನ್ನು ಮೂಲಭೂತವಾಗಿ ಅರ್ಥಮಾಡಿಕೊಂಡು, ಅವರಿಗೆ ಸರಿ ಯಾವುದು, ತಪ್ಪು ಯಾವುದು ಎಂಬುದನ್ನು ಅರ್ಥವಾಗುವ ಹಾಗೆ ತಿಳಿಸಿ ಹೇಳಿಕೊಡಬೇಕು ಎನ್ನುತ್ತಿದ್ದರು.

ಸತ್ಯಾಗ್ರಹ ಕಾಲದಲ್ಲಿ ಕೂಲಿಗಳ ಮನೆಯಲ್ಲಿ ಬಗನಿ ಹೆಂಡ ಕುಡಿದು ಹೇಗೆ ಸ್ವಸ್ಥ ಮಲಗಬಲ್ಲೆವೋ ಅದೇ ಸಮಚಿತ್ತದಲ್ಲಿ ವೈಭವದ ಹೋಟೆಲೊಂದರಲ್ಲಿ ನಾವು ರಾಯಲ್ ಸಲ್ಯೂಟ್ ಕೂಡಾ ಕುಡಿಯಬಲ್ಲೆವು ಎಂದೊಮ್ಮೆ ಸೋಶಲಿಸ್ಟ್ ಎಸ್.ಎಸ್.ಕುಮಟಾ ಹೇಳಿದ್ದರು. ಈ ಮಾತು

ನೆನಪಿಗೆ ಬಂದಾಗಲೆಲ್ಲ ಸಾಹಿತ್ಯ ಓದುವ ನಮ್ಮ ಅನೇಕ ಸಮಾಜವಾದಿಗಳ ವ್ಯಕ್ತಿತ್ವ ಬಹಳ ಸಂಕೀರ್ಣವಾದದ್ದೆಂದು ತೋರುತ್ತದೆ. ಬೇಕಾದಾಗ ವಿಮಾನದಲ್ಲಿ, ಫಸ್ಟ್‌ಕ್ಲಾಸ್ ರೈಲಿನಲ್ಲಿ, ಸ್ಪೆಶಲ್ ಕಾರುಗಳಲ್ಲಿ ಓಡಾಡಿದ ವ್ಯಕ್ತಿ ವೆಂಕಟರಾಮ್. ಆದರೆ ಅವರೊಬ್ಬರೇ ಟ್ಯಾಕ್ಸಿಯಲ್ಲಿ ಪ್ರಯಾಣಿಸುವಾಗ ಎಂದೂ ಹಿಂದಿನ ಸೀಟಿಯಲ್ಲಿ ಕುಳಿತವರಲ್ಲ. ಎದುರಿನ ಸೀಟಿನಲ್ಲಿ ಟ್ಯಾಕ್ಸಿ ಡ್ರೈವರ್‌ನ ಪಕ್ಕ ಕುಳಿತು ಮಾತಾಡುವುದು ಅವರ ಹವ್ಯಾಸ. ಬಾಂಬೆಯ ಟ್ಯಾಕ್ಸಿ ಡ್ರೈವರ್ ಒಬ್ಬ ಜನತಾ ಪಾರ್ಟಿಯ ಆರ್ಥಿಕ ಸಿದ್ಧಾಂತಗಳ ಬಗ್ಗೆ ಮತ್ತು ಚರಣಸಿಂಗರ ಬಗ್ಗೆ ಮಾಡಿದ ಟೀಕೆಗಳನ್ನು ಅವರು ಒಂದು ಭಾಷಣದಲ್ಲಿ ಹೇಳಿದ್ದರು. ವೆಂಕಟರಾಮ್ ಎಲ್ಲಾ ತರದ ಜನರ ಜೊತೆ ಮಾತಾಡುತ್ತಿದ್ದರು. ಜನಗಳ ನೋವನ್ನು ಹತ್ತಿರದಿಂದ ನೋಡುವ ಕಾಳಜಿ ಅವರದ್ದು. ಕಾವ್ಯದಲ್ಲೂ ಅವರು ಇಷ್ಟಪಡುತ್ತಿದ್ದುದು ಇಂಥ ತಿಳಿಯುವ ಅರಿಯುವ ಮೂಲ ಕುತೂಹಲವನ್ನು. ಪ್ರೋ.ಎಂ.ಗೋಪಾಲಕೃಷ್ಣ ಅಡಿಗರ 'ವರ್ಧಮಾನ' ಕವನವನ್ನು ಅವರು ತುಂಬಾ ಮೆಚ್ಚಿದ್ದರು. ಏಕೆಂದರೆ ಅವರೇ ಹೇಳುವಂತೆ, ಯುವ ಮನಸ್ಸು ಮತ್ತು ಶಕ್ತಿಯ ಅತ್ಯಂತ ಸಮಂಜಸವಾದ ತಿಳುವಳಿಕೆಯ ಅನುಭವ 'ವರ್ಧಮಾನ' ಕವನದಲ್ಲಿದೆ.

ಜನಗಳ ಸಾಮೂಹಿಕ ಬದುಕನ್ನು ಅಲ್ಲಿನ ಸಮಸ್ಯೆಗಳನ್ನು ತಿಳಿದು ಪರಿಹಾರ ಯೋಚಿಸುವ ಶಕ್ತಿ ಇದ್ದ ಹಾಗೆ, ಅವರಿಗೆ ವ್ಯಕ್ತಿಯೊಬ್ಬನ ಅಂತರಂಗವನ್ನು ಅರ್ಥ ಮಾಡಿಕೊಳ್ಳುವ ಸಾಮರ್ಥ್ಯವೂ ಇತ್ತು. ಈ ರೀತಿ ವ್ಯವಸ್ಥೆ ಮತ್ತು ವ್ಯಕ್ತಿಯ ಹೊಂದಾಣಿಕೆಯ ಮತ್ತು ಪ್ರತ್ಯೇಕತೆಯ ಸಂಬಂಧ ಕಲ್ಪನೆ ಇದ್ದುದರಿಂದಲೇ ಅವರು ದೊಡ್ಡ ತಾತ್ವಿಕರಾದುದಿರಲೂಬಹುದು. ಇನ್ನೊಂದು ಉದಾಹರಣೆ ಹೇಳುವುದಾದರೆ; ಚಿಕ್ಕಮಗಳೂರು ಚುನಾವಣಾ ಸಮಯದಲ್ಲಿ ಜಾರ್ಜ್ ಫರ್ನಾಂಡಿಸರ ಕಾರು ಹಗಲಿರುಳು ಓಡಾಡುತ್ತಿತ್ತು. ಬಿಡುವಿರದ ಕಾರಿನ ಅಷ್ಟೂ ಓಡಾಟಕ್ಕೂ ಒಬ್ಬನೇ ಡ್ರೈವರ್. ಅತ್ಯಂತ ವಿಶ್ವಾಸಾರ್ಹ ಡ್ರೈವರ್ ಎಂದು ಹೆಸರು ಪಡೆದಿದ್ದ ಆತ, ಹಿಂದೆ ಸೋಷಲಿಸ್ಟ್ ಪಾರ್ಟಿಯ ರಾಜ್ಯ ಕಚೇರಿಗಿದ್ದ ಕಾರಿನ ಚಾಲಕನಾಗಿದ್ದ. ಆತನ ಕೆಲಸ ಪಾರ್ಟಿಯ ಕಾರು ಬಿಡುವುದು ಮತ್ತು ಅದಕ್ಕವನು ಸಂಬಳವನ್ನು ಪಡೆಯುತ್ತಿದ್ದ.

ಹಿಂದೆ ಸಮಾಜವಾದಿ ಚಳವಳಿಯೊಂದರಲ್ಲಿ ಜೈಲು ಕಂಡಿದ್ದ ಆತ ಶಾಂತವೇರಿ ಗೋಪಾಲ ಗೌಡರ ಕಾಲದಲ್ಲಿ ಬೆಂಗಳೂರಿನ ಪಾರ್ಟಿ ಕಚೇರಿಯಲ್ಲಿ ಕೆಲಸ ಪಡೆದಿದ್ದ. ನಿಧಾನಕ್ಕೆ ಅವನಲ್ಲಿ ತಾನೂ ಒಂದು ಸ್ವಂತ ಕಾರನ್ನು ಬಾಡಿಗೆಗೆ ಓಡಿಸಬೇಕು ಎಂಬ ಆಸೆ ಬೆಳೆಯಿತು. ಜೆ.ಎಚ್.ಪಟೇಲ್ ಲೋಕಸಭಾ ಸದಸ್ಯರಾದಾಗ ತನ್ನ ಆಸೆ ತೋಡಿಕೊಂಡಿದ್ದ. ಆಮೇಲೆ ಅನುಕ್ರಮವಾಗಿ ಮೇಲೆ ಬಂದ ಎಲ್ಲ ಸೋಶಲಿಸ್ಟ್ ಮುಖಂಡರಲ್ಲೂ ತನಗೆ ಜಾಮೀನ ನಿಂತು ಕಾರು ಕೊಳ್ಳಲು ಬ್ಯಾಂಕಿನಿಂದ ಹದಿನೈದು ಸಾವಿರ ಸಾಲ ಕೊಡಿಸಬೇಕೆಂದು ಬೇಡುತ್ತಾ ಹೋದ.

ಎಲ್ಲರೂ ಆಶ್ವಾಸನೆ ಕೊಡುತ್ತಾ ಹೋದರು. ತಾವು ಪ್ರತಿದಿನ ಓಡಾಡುವ ಕಾರಿನ ಡ್ರೈವರಿಗೆ ನಿತ್ಯ ನೋಡುವ ಮುಖಕ್ಕೆ ಆತ, ಯಾರೋ ಒಬ್ಬ ಎನ್ನುವ ಹಾಗೆ ಬರೇ ಸುಳ್ಳು ಸುಳ್ಳೇ ಆಶ್ವಾಸನೆ ಕೊಡುತ್ತಾ ಹೋದರು. ಪ್ರಾರಂಭದಲ್ಲಿ ಪಕ್ಷದವರು ಹೇಳುವುದು ನಿಜ ಎಂದು ನಂಬುತ್ತಿದ್ದ ಅವನಿಗೆ ಕೊನೆಗದು ಸುಳ್ಳು ಎಂದು ಗೊತ್ತಾದಾಗ ಬಹಳ ಭ್ರಮನಿರಸನಗೊಂಡ. ಮತ್ತೆ ಒಮ್ಮೊಮ್ಮೆ ತೀರಾ ರ್‍ಯಾಶ್ ಆಗಿ ಡ್ರೈವ್ ಮಾಡುತ್ತಿದ್ದನಂತೆ. ಆತನಿಗಾದ ಭ್ರಮನಿರಸನ ಕಾರು ಚಾಲನೆಯಲ್ಲಿ ಅವನಿಗಿದ್ದ ಅದ್ಭುತ ತನ್ಮಯತೆಯನ್ನೂ ನಾಜೂಕಿನ ಶಕ್ತಿಯನ್ನೂ ನಿಧಾನಕ್ಕೆ ಕಡಿಮೆ ಮಾಡುತ್ತಾ ಹೋಯಿತು ಎಂದ ವೆಂಕಟರಾಮ್, ಆತನ ಒಳ್ಳೆಯತನಕ್ಕೆ ತುಂಬಾ ನೋವಾಗಿದೆ. ಅವನ ಮೃದು ಭಾವನೆಗಳು ಸತ್ತಿವೆ. ಆದರೆ ಇಂದಿನ ಸ್ಪರ್ಧೆಯ ಜಗತ್ತಿನಲ್ಲಿ ವ್ಯಕ್ತಿಯ ಒಳಗನ್ನು ನೋಡುವ ತಾಳ್ಮೆ ಯಾವ ನಾಯಕನಿಗಿದೆ ಎಂದರು. ಆ ಮೇಲೆ ಭಕ್ತಿಪುರಸ್ಸರವಾಗಿ ಈಗವನು ಜಾರ್ಜನ ಕೆಲಸ ಮಾಡಿ ಆತನಲ್ಲೂ ಕಾರಿಗೆ ಸಾಲಕೊಡಿಸಲು ಕೇಳುತ್ತಾನೆ. ಪುನಃ ಹಿಂದಿನ ಅನುಭವವೇ ಆಗಿ ಇನ್ನಷ್ಟು ನಿರಾಸೆ ಹೆಚ್ಚುತ್ತದೆ ಎಂದೂ ಸೇರಿಸಿ ಪಾರ್ಟಿ ಡ್ರೈವರ್‌ನ ವಿಷಯ ಮುಗಿಸಿದರು. ವ್ಯಕ್ತಿಯೊಬ್ಬನ ಒಳಗನ್ನು ಕಂಡ, ನಿತ್ಯ ನೋಡುವ ಮುಖಕ್ಕೂ ಹುಸಿ ಆಶ್ವಾಸನೆ ಕೊಡುವ ಕ್ರೌರ್ಯದ ಬಗ್ಗೆ ಜಿಗುಪ್ಸೆ ತಾಳಿದ ರೀತಿ ನೋಡಿ, ಆ ಕ್ಷಣ ವೆಂಕಟರಾಮ್ ನನಗೆ ಸಮೃದ್ಧವಾಗಿ ಮನೋವಿಜ್ಞಾನ ತಿಳಿದ ಒಬ್ಬ ಶ್ರೇಷ್ಠ ಕಾದಂಬರಿಕಾರನಂತೆ ಕಂಡರು.

ಈ ರೀತಿ ತಿಳಿಯುವ ಕುತೂಹಲದಿಂದ ಅರ್ಥಮಾಡಿಕೊಳ್ಳುವ, ಆಮೇಲೆ ಅದನ್ನು ವಿಶ್ಲೇಷಣೆಗೆ ಒಳಪಡಿಸುವ ಮನಸ್ಸಿನ ಪ್ರಕ್ರಿಯೆ ಡಾ. ಲೋಹಿಯಾರ ಪ್ರಭಾವಕ್ಕೆ ಒಳಗಾದವರಿಗೆಲ್ಲ ಸಾಮಾನ್ಯವಾದ ಅಂಶ. ಆದರೆ ಡಾ. ಲೋಹಿಯಾರ ಅನೇಕ ಶಿಷ್ಯರು ಅವರಿಂದ ಪ್ರಾಮಾಣಿಕತೆಯನ್ನು ಮಾತ್ರ ಸಂಗೀತ ಸಾಹಿತ್ಯ ಮೊದಲಾದವುಗಳಲ್ಲಿ ಆಸಕ್ತಿಯನ್ನು ಬೆಳೆಸಿಕೊಳ್ಳುವುದರೊಂದಿಗೆ ಅತ್ಯಂತ ಪ್ರಾಮಾಣಿಕ ರಾಜಕಾರಣಿಯೂ, ಉತ್ತಮ ಸಂಘಟಕನಾದ ನಾಯಕನೂ ಆಗಿದ್ದರು. ತಮ್ಮ ಪರಿಧಿಯೊಳಗೆ ಬೆಳೆಯುವ ಎಳೆ ನಾಯಕರನ್ನು ಧ್ವಂಸ ಮಾಡುವ ಇಂದಿನ ರಾಜಕೀಯ ಕ್ಷೇತ್ರದಲ್ಲಿ ವೆಂಕಟರಾಮ್ ತಮ್ಮ ಸುತ್ತಮುತ್ತಲಿದ್ದವರನ್ನು ನಾಯಕರಾಗಿ ಬೆಳೆಸುತ್ತಿದ್ದ ಅಪರೂಪದ ವ್ಯಕ್ತಿ.

ಜನತಾ ಪಾರ್ಟಿ ಒಡೆದಾಗ ಬಹಳ ನೊಂದ ವೆಂಕಟರಾಮ್ ತಮ್ಮ ಪ್ರೀತಿಯ ಜಾರ್ಜ್ ಫರ್ನಾಂಡಿಸ್ ಮತ್ತು ಮಧು ಲಿಮಯೆ ಜೊತೆ ಸೇರಿ ಮಾಡಿದ ಕೃತ್ಯವನ್ನು ನಿರ್ದಾಕ್ಷಿಣ್ಯವಾಗಿ ವಿರೋಧಿಸಿದರು. ಆದರೂ ಹತಾಶರಾಗದೆ ಇಂಡಿಯಾದಲ್ಲಿ ಸಧ್ಯಕ್ಕೆ ಕಾಂಗ್ರೆಸ್ ಬಾಯಿಯಿಂದ ವಿರೋಧ ಪಕ್ಷವನ್ನು ಕಾರ್ಮಿಕ ಹಾಗೂ ರೈತ ಸಂಘಟನೆಯಲ್ಲಿ, ಅದರಲ್ಲೂ ಹೆಚ್ಚಾಗಿ ಹಳ್ಳಿಯ ಕಾರ್ಮಿಕರ ಸಂಘಟನೆಯ ಮೂಲಕ ಮಾತ್ರ ಉಳಿಸಬಹುದೆಂಬ ನಂಬಿಕೆಯಿಂದ, ಆ ಕಡೆ ತಮ್ಮ ಗಮನ ಹರಿಸಿದರು.

ರಾಜಕಾರಣಿ ಬುದ್ಧಿಜೀವಿಯೂ, ವಿಮರ್ಶಕ ವಿದ್ವಾಂಸನೂ ಆಗಿದ್ದ ವೆಂಕಟರಾಮ್ ಇನ್ನಿಲ್ಲ. ಈಗ 'ಅಕ್ಷರ ಪ್ರಕಾಶನ'ದಲ್ಲಿ ಅಚ್ಚಾಗುತ್ತಿರುವ ಅವರ ಹೊಸ ಪುಸ್ತಕ 'ಪರ್ಯಟನೆ' (ಅಮೇರಿಕಾ ಪ್ರವಾಸ ಕಥನ) ವೆಂಕಟರಾಮ್ ವ್ಯಕ್ತಿತ್ವವನ್ನು ಓದುಗರಿಗೆ ಇನ್ನಷ್ಟು ಪರಿಚಯಿಸಬಹುದು. ತಮ್ಮ ಸಾವಿಗೆ ಸ್ವಲ್ಪ ಸಮಯದ ಮೊದಲು ನಮ್ಮ ಪಠ್ಯ ಪುಸ್ತಕದಲ್ಲಿ ಇರುವ ತಪ್ಪುಗಳ ಬಗ್ಗೆ ಅವರು ಬರೆದ ಒಂದು ಧೀರ್ಘ ಲೇಖನವನ್ನು ಎರಡು ಕಂತುಗಳಲ್ಲಿ 'ಕನ್ನಡ ಪ್ರಭ' ಪ್ರಕಟಿಸಿತು. ನಮ್ಮ ಎಲಿಮೆಂಟರಿ

ಮತ್ತು ಹೈಸ್ಕೂಲು ಪಠ್ಯಪುಸ್ತಕಗಳಲ್ಲಿ ಇರುವ ತಪ್ಪುಗಳ ಬಗ್ಗೆ ವಿಧಾನ ಪರಿಷತ್ತಿನಲ್ಲಿ ಭಾಷಣ ಮಾಡಲು ಅವರು ಅಷ್ಟೂ ಪಠ್ಯ ಪುಸ್ತಕಗಳನ್ನು ಓದಿ ಅಭ್ಯಾಸ ಮಾಡಿದ್ದರು. ನಮ್ಮ ಮಕ್ಕಳಿಗೆ ಯೋಗ್ಯವಾದ, ಅಂದರೆ ಯೋಚನೆ ಮಾಡುವ ಶಕ್ತಿಯನ್ನೂ ಯಾವುದಾದರೂ ಒಂದು ಕೆಲಸ ಮಾಡುವ ಕೌಶಲವನ್ನೂ ಕಲಿಸಿಕೊಡುವ ವಿದ್ಯಾಭ್ಯಾಸ ಇರಬೇಕು ಎಂದು ಒಂದು ಸಂದರ್ಭದಲ್ಲಿ ನಾನು ಹೇಳಿದಾಗ ಅವರದನ್ನು ತುಂಬಾ ಮೆಚ್ಚಿಕೊಂಡಿದ್ದರು.

ವೆಂಕಟರಾಮ್ ಕರ್ನಾಟಕ ವಿಧಾನ ಪರಿಷತ್ತಿನ ಸದಸ್ಯರಾದುದು ಸರಕಾರಕ್ಕೆ ಏನನ್ನಾದರೂ ಹೇಳಲು ಬೆಲೆಯುಳ್ಳ ಒಂದು ವೇದಿಕೆಯನ್ನು ಪಡೆಯುವುದಕ್ಕೆ ಮಾತ್ರ, ಅವರ ನಿಜವಾದ ಜೀವವಿದ್ದುದು ಕಾರ್ಮಿಕರ ನಡುವೆಯೆ. ಆದರೂ ಅವರು ಜಾರ್ಜ್ ಫರ್ನಾಂಡಿಸರಂಥ ಜನ ನಾಯಕ ಅಲ್ಲ. ಕೇವಲ ತಳದಲ್ಲಿದ್ದು ಕಡ್ಡಿಕಟ್ಟುತ್ತಿದ್ದ ಸೂಕ್ಷ್ಮ ಸಂಘಟಕ. ಆದ್ದರಿಂದಲೇ ರಾಜಕೀಯ ಗೊತ್ತಿದ್ದವರಿಗೆ, ರಾಜಕೀಯ ತತ್ವಗಳನ್ನು ಅಭ್ಯಾಸ ಮಾಡುವವರಿಗೆ ವೆಂಕಟರಾಮ್ ಬರೆದದ್ದು, ಬದುಕಿದ್ದು ಮರೆಯಲಾರದ ನೆನಪು.